ಸ್ಕೂಲೇನು? ಆರಾಮ್ ಕುರ್ಚಿನೇ ಮಾಡಿಸಿಕೊಡ್ತೀನಿ ಬಿಡಿ” ಎಂದು ಆಶ್ವಾಸನೆ ಕೊಟ್ಟವನು ಒಂದು ತಿಂಗಳು ಅಂಗಡಿ ಕಡೆ ತಲೆ ಹಾಕಲಿಲ್ಲ. ರಾಮು ರಹಸ್ಯ ಕೇಳಲು ಹೊರಟ ಗ್ಯಾಂಗಿನ ಉದ್ದೇಶ ಕೊನೆಗೆ ಮನಸ್ತಾಪದಲ್ಲಿ ನಿಂತಿತು. ಎಲ್ಲರ ಮುಖಗಳು ಕೆಂಪಾಗಿದ್ದವು. ಯಾರಿಗೂ ಮಾತಾಡುವ ಮಾತಿರಲಿಲ್ಲ. ಆಗ ಈ ಜಗಳಕ್ಕೊಂದು ಶಾಂತಿಯಾಗಲೇಬೇಕಿತ್ತು. ಪೈಯಿಂಟರ್ ಶಿವು ಸಂತನಂತೆ ಮೌನ ಮುರಿದು ನ್ಯಾಯ ತೀರ್ಮಾನ ಹೇಳಿದ. “ಇವತ್ತು ಅಮಾಸೆ. ಒಳ್ಳೆ ದಿನವಲ್ಲ. ಹಿಂಗಾಗಿ ಹಿಂಗೆಲ್ಲಾ ಆಗಿದೆ. ಮೈನ್ ಫ್ರೆಂಡ್‌ಶಿಪ್ ಉಳೀಬೇಕು. ಮೊದಲು ಕಿಚಾಯಿಸಿ ಮಾತಾಡಿದ ಶಿವೂದೆ ತಪ್ಪು. ಅವನೇ ಎಲ್ಲರಿಗೂ ಖಾರ ಮಂಡಕ್ಕಿ ಪಕೋಡ, ಟೀ ಕೊಡಸಬೇಕು. ಇದು ಎಲ್ಲರ ತೀರ್ಮಾನ'' ಎಂದನು. ಅದು ಎಲ್ಲರ ತೀರ್ಮಾನ ಆಗಿರದಿದ್ದರೂ ಎಲ್ಲರೂ ಒಪ್ಪಿಕೊಂಡವರಂತೆ ಸುಮ್ಮನಾದರು. ಟೈಲರ್ ಶಿವು, “ಆಯ್ತು ಸಭೆ ತೀರ್ಮಾನದಂಗೆ ಕೊಡ್ಸುಸ್ತೀನಿ. ಎಲ್ಲರೂ ನೋಡಿ ಹಿತಮಿತವಾಗಿ ತಿನ್ಬೇಕು. ದನ ತಿಂದಂಗೆ ತಿಂದರೆ ನಾನು ಬೋಂಡ ಅಂಗಡೀಲಿ ಒಂದು ವಾರ ಕೆಲಸಕ್ಕೆ ಇರ್ಬೇಕಾಗುತ್ತೆ” ಎಂದಾಗ ಕಣ್ಣನ್ ಪುಸುಕ್ಕನೆ ನಕ್ಕು ಬಿಟ್ಟ. ಅಲ್ಲಿಗೆ ಜಗಳ ಮುಗಿದು ಶಾಂತಿ ಸಭೆ ಯಶಸ್ವಿಯಾಯಿತು. ಆವೇಶದಲ್ಲಿ ಬೆಂಚು ಮುರಿದ ಮನ್ಸೂರ್ ಅವತ್ತಿನ ಪಾರ್ಟಿಗೆ ಮಿಸ್ಸಾದನು.

ಒಮ್ಮೆ ಕಾಡಿಗೆ ಕಟ್ಟಿಗೆ ತರಲು ಹೋಗುವ ಬೀದಿಯ ಹುಡುಗ ಸುಂಕಣ್ಣ ಗಿಳಿಮರಿಯೊಂದನ್ನು ತಂದ. ತಕ್ಕ ಮಟ್ಟಿಗೆ ಬೆಳೆದಿದ್ದ ಗಿಳಿಯನ್ನು ಆತ ಮರದ ಪೊಟರೆಯಿಂದ ಹೆಕ್ಕಿದ್ದ. “ಒಳ್ಳೆ ರೇಟು ಕೊಡುವುದಾದರೆ ಕೊಡುತ್ತೀನಿ ಅಂತ” ಆತ ಟೈಲರ್ ಕುಮಾರನ ಹತ್ತಿರ ಚೌಕಾಶಿ ಮಾಡುತ್ತಿದ್ದ. “ನೀನೇ ಹೆತ್ತು ಸಾಕಿ ಸಲುವಿದವನಂಗೆ ಮಾತಾಡ್ತೀಯಲ್ಲ, ಮುಚ್ಕೊಂಡು ಕೊಟ್ಟಷ್ಟು ತಗೊಂಡೋಗು” ಎಂದು ಕುಮಾರನೂ ತಕರಾರು ತೆಗೆದಿದ್ದ. “ಗಿಳಿ ಹಿಡಿಯೋದು ಅಷ್ಟು ಸಲೀಸಲ್ಲ ಅಣ್ಣಾ! ಅದರ ಕಾಲಿನ ಉಗ್ರು ನೋಡಿ. ಚೂಪು ಮೂತಿ ನೋಡ್ರಿ. ಬಡ್ಡೀಮಂಗದು ಇಟ್ಟು ಎಳದ್ರೆ ಕೈ ಚರ್ಮ ಎಬ್ಕೊಂಡು ಬರುತ್ತೆ. ತಾಯಿ ಗಿಳಿ ನೋಡಿದ್ರೆ ನನ್ನ ಪ್ರಾಣಾನೇ ತೆಗೀತಿತ್ತು ಗೊತ್ತಾ” ಎಂದು ತನ್ನ ಶಿಕಾರಿಯ ಅಪಾಯಕರ ಆಯಾಮಗಳನ್ನು ಸುಂಕಣ್ಣ ದೊಡ್ಡದು ಮಾಡಿ ಹೇಳುತ್ತಿದ್ದ. “ಲೇ

